**ಕರ್ನಾಟಕ ಸರ್ಕಾರ**

**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ :: 21/2021**

ಪ್ರಾಸಾ- 1 ಚಾಸಾ- 1

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಷಣ್ಮುಖ |
| ತಂದೆಯ ಹೆಸರುಃ | ಃ | ಚಂದ್ರಶೇಖರ್ ಉರುಫ್ ಚಂದ್ರೇಗೌಡ |
| ವಯಸ್ಸುಃ | ಃ | 20 ವರ್ಷ |
| ಉದ್ಯೋಗಃ | ಃ | ವಿದ್ಯಾರ್ಥಿ |
| ವಾಸಃ | ಃ | ಹಳೇಬೀಡು, ಬೇಲೂರು ತಾಲ್ಲೂಕು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 21-02-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಜನವರಿ 2020 ರಲ್ಲಿ ನಾನು ಹಳೇಬೀಡುವಿನಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿದ್ದೆ. ದಿನಾಂಕ 09.01.2020 ರಂದು ನನ್ನ ತಾಯಿಗೆ ತಲೆನೋವಿದ್ದ ಕಾರಣ ಆ ದಿನ ಸಂಜೆ ಸುಮಾರು 5.30 ಗಂಟೆ ಸಮಯದಲ್ಲಿ ಮಾತ್ರೆ ತೆಗೆದುಕೊಂಡು ಬರಲು ಜಾವಗಲ್ ರಸ್ತೆಯಲ್ಲಿರುವ ಶಶಿ ಅಂಗಡಿ ಹತ್ತಿರ ಇರುವ ಮೆಡಿಕಲ್ ಶಾಪ್ ಗೆ ಹೋಗುತ್ತಿದ್ದೆ. ಆ ಸಮಯದಲ್ಲಿ ಜಾವಗಲ್ ರಸ್ತೆಯ ಬಲಬದಿಯಲ್ಲಿರುವ ವೆಲ್ಡಿಂಗ್ ಶಾಪ್ ನಲ್ಲಿದ್ದ ಸೈಫುಲ್ಲಾ ಮತ್ತು ಮುಬಾರಕ್ ಹಾಯ್ ಎಂದು ಕೂಗಿರುತ್ತಾರೆ. ಆಗ ನಾನು ತಿರುಗಿರುತ್ತೇನೆ. ಆಗ ಉರಿಯುತ್ತಿದ್ದ ಟಿನ್ನರ್ ಡಬ್ಬವನ್ನು ಮುಬಾರಕ್ ಕಾಲಿನಿಂದ ನನ್ನ ಕಡೆಗೆ ಒದ್ದಿರುತ್ತಾನೆ. ಆಗ ನನ್ನ ಬಟ್ಟೆಗೆ ಬಣ್ಣ ಚೆಲ್ಲಿರುತ್ತದೆ. ಆಗ ನಾನು ಮುಬಾರಕ್ ನಲ್ಲಿ ಮತ್ತು ಅಂಗಡಿಯ ಮಾಲೀಕರಾದ ಮುಬಾರಕ್ ಎನ್ನುವವರಲ್ಲಿ ಯಾಕೆ ಹಾಗೆ ಮಾಡಿದ್ದು ಎಂದು ಕೇಳಿರುತ್ತೇನೆ. ಆಗ ಅಂಗಡಿಯವರು ನನಗೆ ಟರ್ಪೆಂಟೈನ್ ಕೊಟ್ಟಿದ್ದು

ಆದರಿಂದ ನಾನು ನನ್ನ ಬಟ್ಟೆಗೆ ಚೆಲ್ಲಿದ್ದ ಬಣ್ಣವನ್ನು ಒರೆಸಿಕೊಂಡಿರುತ್ತೇನೆ. ಆಗ ಮುಬಾರಕ್ ನನ್ನಲ್ಲಿ ಬೆಂಕಿ ಕಡ್ಡಿ ಗೀರಲಾ ಎಂದು ಹೇಳಿರುತ್ತಾನೆ. ಆಗ ನಾನು ಬೇಡ ಎಂದು ಹೇಳಿದರೂ ಮುಬಾರಕ್ ಬೆಂಕಿಕಡ್ಡಿ ಗೀರಿದ್ದು ಇದರಿಂದ ನನ್ನ ಮೈಮೇಲಿದ್ದ ಪ್ಯಾಂಟು ಮತ್ತು ಶರ್ಟಿಗೆ ತಾಗಿ ಬೆಂಕಿ ಹತ್ತಿಕೊಂಡು ಉರಿದಿರುತ್ತದೆ. ಆಗ ಅಂಗಡಿ ಮುಂದೆ ಇದ್ದ ಎಲ್ಲರೂ ಚಪ್ಪಾಳೆ ಹೊಡೆದುಕೊಂಡು ನಗುತ್ತಿದ್ದರು. ನಂತರ ಎದುರುಗಡೆ ಅಂಗಡಿಯವರು ಬಂದು ನೀರು ಹಾಕಿ ಗೋಣಿ ಚೀಲ ಹೊದಿಸಿ ಬೆಂಕಿಯನ್ನು ಆರಿಸಿ ನನ್ನನ್ನು ರಘು ಮತ್ತು ಸುಪ್ರೀತ್ ಎನ್ನುವವರು ಬೈಕಿನಲ್ಲಿ ಹಳೇಬೀಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನನಗೆ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಆ್ಯಂಬ್ಯುಲೆನ್ಸ್ ನಲ್ಲಿ ಹಾಸನ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು ಒಂದು ವಾರದ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ. ನಾನು ಹಾಸನ ಸರ್ಕಾರಿ ಆಸ್ಪತ್ರೆಗೆ ಬಂದ ನಂತರ ರಾತ್ರಿ ಸುಮಾರು 9.30 ಗಂಟೆ ಸಮಯದಲ್ಲಿ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ತೆಗೆದುಕೊಂಡಿರುತ್ತಾರೆ. ಸದರಿ ಹೇಳಿಕೆಗೆ ನಾನು ನನ್ನ ಸಹಿ ಮಾಡಿರುತ್ತೇನೆ. ಈಗ ತೋರಿಸಿದ ದಾಖಲೆ ಸದರಿ ನನ್ನ ಹೇಳಿಕೆ ದೂರು ಆಗಿದ್ದು ಅದನ್ನು ನಿಶಾನೆ ಪಿ.1 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.1(ಎ) ಎಂದು ಗುರುತಿಸಲಾಗಿದೆ.

2. ಈ ಮೇಲೆ ಹೇಳಿದಂತೆ ನನ್ನ ಮೈಗೆ ಬೆಂಕಿ ಹಚ್ಚಿದ್ದರಿಂದ ನನ್ನ ಎಡಗಾಲು ಮತ್ತು ಎಡಗೈನ ಐದೂ ಬೆರಳುಗಳಿಗೆ ಸುಟ್ಟಗಾಯಗಳಾಗಿರುತ್ತದೆ. ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಮುಬಾರಕ್ ನನ್ನ ಮೇಲೆ ಕುದಿಯುವ ಟಿನ್ನರ್ ನ್ನು ಒದ್ದು ಬೆಂಕಿ ಹಚ್ಚಿರುತ್ತಾನೆ. ಮುಬಾರಕ್ ನ ಜೊತೆ ಸೈಫುಲ್ಲಾ ಸಹ ಉರಿಯುತ್ತಿದ್ದ ಟಿನ್ನರನ್ನು ನನ್ನ ಕಡೆಗೆ ಒದ್ದಿರುತ್ತಾನೆ. ಈ ಮೇಲೆ ಹೇಳಿದ ಮುಬಾರಕ್ ಮತ್ತು ಸೈಫುಲ್ಲಾ ನನ್ನು ಈಗ ನೋಡಿದರೆ ಗುರುತಿಸಬಲ್ಲೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿ ಸದರಿ ಮುಬಾರಕ್ ಆಗಿರುತ್ತಾನೆ. ಘಟನೆಯಲ್ಲಿ ಸುಟ್ಟಿರುವ ನನ್ನ ಬಟ್ಟೆಗಳು, ಬೆಂಕಿ ಕಡ್ಡಿ ಪೊಟ್ಟಣ ಮತ್ತು ಟಿನ್ನರ್ ನ್ನು ಈಗ ನೋಡಿದರೆ ಗುರುತಿಸಬಲ್ಲೆ. ಈಗ ನ್ಯಾಯಾಲಯದ ಮುಂದಿರುವ ಕೆಂಪು ಬಣ್ಣದ ಡಬ್ಬ, ಒಂದು ಸಣ್ಣ ಡಬ್ಬ ಮತ್ತು ಬೆಂಕಿ ಪೊಟ್ಟಣ ಸದರಿ ವಸ್ತುಗಳಾಗಿದ್ದು ಅವುಗಳನ್ನು ಅನುಕ್ರಮವಾಗಿ ಎಂ.ಒ.1 ರಿಂದ ಎಂ.ಒ.3 ಎಂದು ಗುರುತಿಸಲಾಗಿದೆ.

3. (ಈಗ ನ್ಯಾಯಾಲಯದ ಮುಂದಿರುವ ಸೀಲುಮಾಡಿದ 2 ಪೊಟ್ಟಣಗಳನ್ನು ತೆರೆದು ನೋಡಲಾಗಿ ಅವುಗಳಲ್ಲಿ ಒಂದು ಹರಿದ ಪ್ಯಾಂಟು ಮತ್ತು ಶರ್ಟು ಇರುತ್ತವೆ) ಸದರಿ ಪ್ಯಾಂಟು

ಮತ್ತು ಶರ್ಟ್ ಈ ಮೇಲೆ ಹೇಳಿದ ಘಟನೆಯ ಸಂದರ್ಭದಲ್ಲಿ ನಾನು ಧರಿಸಿದ್ದ ಬಟ್ಟೆಗಳಾಗಿದ್ದು ಅವುಗಳನ್ನು ಅನುಕ್ರಮವಾಗಿ ಎಂ.ಒ.4 ಮತ್ತು ಎಂ.ಒ.5 ಎಂದು ಗುರುತಿಸಲಾಗಿದೆ. ಈ ಕೇಸಿನಲ್ಲಿ ನಾನು ಪೊಲೀಸರಿಗೆ ಪಿರ್ಯಾದು ಕೊಟ್ಟ ನಂತರ ನಾನು ಆಸ್ಪತ್ರೆಯಲ್ಲಿ ಇದ್ದ ಸಂದರ್ಭದಲ್ಲಿ ಪೊಲೀಸರು ಪುನಃ ಬಂದು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ ನಾನು ಒಂದು ವಾರದ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ. ನಂತರ ಮನೆಗೆ ಬಂದು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಹಳೇಬೀಡು ಸರ್ಕಾರಿ ಆಸ್ಪತ್ರೆಗೆ ಹೋಗಿ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಕೆ. ವಕೀಲರಿಂದಃ-**

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿರುತ್ತಾರೆ, ಆದರೆ ಸಮಯಾವಕಾಶ ನೀಡಲು ಯಾವುದೇ ಸಕಾರಣ ಇರುವುದಿಲ್ಲ. ಆರೋಪಿಯು ಈ ಹಿಂದೆ ಆದೇಶ ಮಾಡಿರುವ ಖರ್ಚಿನ ಹಣವನ್ನು ಸಹ ಸಾಕ್ಷಿಗೆ ಪಾವತಿಸಿಲ್ಲ. ಈ ಕಾರಣದಿಂದ ಆರೋಪಿ ಪರ ವಕೀಲರ ಕೋರಿಕೆಯನ್ನು ತಿರಸ್ಕರಿಸಿ ಪಾಟೀಸವಾಲು ಇಲ್ಲವೆಂದು ತೆಗೆದುಕೊಂಡು ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿದೆ)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**